- ನಾಟಕಕಾರ ಗಿರೀಶ ಕಾರ್ನಾಡ ಕುರಿತ ವಿಶೇಷ ಸಂಚಿಕೆ (ಆಗಸ್ಟ್, 2019) ವಿಶಿಷ್ಟವಾಗಿದೆ. ಈ ಸಂಚಿಕೆಯಲ್ಲಿ ಅವರ ಒಡನಾಡಿಗಳು ಬರೆದ ಲೇಖನಗಳು ಕಾರ್ನಾಡರ ವ್ಯಕ್ತಿತ್ವ ಮತ್ತು ಪ್ರತಿಭೆಯ ಆಳಅಗಲಗಳನ್ನು ಪರಿಚಯಿಸುವಲ್ಲಿ ಯಶಸ್ವಿಯಾಗಿವೆ.

**ಗುರುದೇವ, ಹುಬ್ಬಳ್ಳಿ,**
**ಮೋಹನಕುಮಾರ್ ಎಸ್., ಮೈಸೂರು**

- 'ನಂದಾದೀಪ'ದಲ್ಲಿ ಪ್ರಕಟವಾದ ಗಿರೀಶ ಕಾರ್ನಾಡರ ಕುರಿತ ಎಲ್ಲ ಲೇಖನಗಳು ಹೃದಯಸ್ಪರ್ಶಿಯಾಗಿವೆ ಮತ್ತು ಆಪ್ತವಾಗಿವೆ. ವಿವಿಧ ಕ್ಷೇತ್ರಗಳ ಜನರು ತಾವು ಕಂಡ ಕಾರ್ನಾಡರನ್ನು ಸುಂದರವಾಗಿ ಮತ್ತು ಜೀವಂತವಾಗಿ ಚಿತ್ರಿಸಿದ್ದಾರೆ.


**ಎನ್. ಮಹಾದೇವ, ಚೆನ್ನೈ,**
**ದೇವೀಂದ್ರಪ್ಪ ಹಂಪಿ**

- ಸಾಂಸ್ಕೃತಿಕ ವ್ಯಕ್ತಿ ಗಿರೀಶ ಕಾರ್ನಾಡರ ಕುರಿತಾದ ಕತೆಗಾರ ಜಯಂತ ಕಾಯ್ಕಿಣಿ ಲೇಖನ 'ಖಾನೆಸುಮಾರಿ'ಗೆ ಸಿಗದ ಘನವಂತ' ಚೇತೋಹಾರಿಯಾಗಿದೆ. ಕಾರ್ನಾಡರ ವಿಭಿನ್ನ ವ್ಯಕ್ತಿತ್ವನ್ನು ಕಟ್ಟಿಕೊಟ್ಟ ಸಿನಿನಿರ್ದೇಶಕ ಚೈತನ್ಯ ಕೆ.ಎಂ. ಬರಹವೂ ಉತ್ತಮವಾಗಿದೆ.

**ಎಸ್.ಪಿ. ಶ್ಯಾನಭಾಗ, ಬೆಂಗಳೂರು,**
**ಕೆ.ಆರ್. ಪಾರ್ವತಿ, ವಿಜಯಪುರ**

- ಸಿನಿನಿರ್ದೇಶಕ ಶ್ಯಾಮ್ ಬೆನೆಗಲ್ ಅವರ ಲೇಖನ 'ಬಣ್ಣಿಸಲಾಗದ ವ್ಯಕ್ತಿತ್ವ' ಅರ್ಥಪೂರ್ಣವಾಗಿದೆ. ದೇಶ – ವಿದೇಶದಲ್ಲಿ ತಮ್ಮದೇ ಛಾಪು ಮೂಡಿಸಿದ ಕಾರ್ನಾಡರದು ಅಂತಃಕರಣದ ವ್ಯಕ್ತಿತ್ವ. ಅದನ್ನು ನಿಜಕ್ಕೂ ಬಣ್ಣಿಸಲಾಗದು.

**ಕೆ.ಎಸ್. ರಾಜಶೇಖರ, ವಿಜಯಪುರ**




- ಗಿರೀಶರ ವ್ಯಕ್ತಿತ್ವವನ್ನು ಸಾರುವ ಎಲ್ಲಾ ಲೇಖನಗಳು ಮನಮುಟ್ಟುವಂತಿವೆ. ನಾಟಕ ಹಾಗೂ ಸಿನಿಮಾಗಳ ಮೂಲಕ ಅವರು ಪ್ರತಿದಿನ ನೆನಪಾಗುತ್ತಲೇ ಇರುತ್ತಾರೆ.

**ಬಿ.ಕೆ. ಓಂಕಾರ ಮೂರ್ತಿ, ಬಿ.ಜಿ. ಕೆರೆ,**
**ರಾ.ಶಿ. ಕಲ್ಮಠ, ಇಳಕಲ್ಲ**

- ವಿನಾಯಕ ಅರಳಸುರಳಿ ಅವರ ಕತೆ 'ಯಾವ ಜನ್ಮದ ಮೈತ್ರಿ' ಒಂದು ಅನನ್ಯ ಪ್ರಯಾಣದಂತೆ ಭಾಸವಾಯಿತು. ಗೆಳೆತನದ ಸಲುಗೆಯಿಂದ ಕಂಕಣಬಲದವರೆಗಿನ ಪಯಣ ಸೊಗಸಾಗಿ ಅನಾವರಣಗೊಂಡಿದೆ. ನಾಗರಾಜ ವಸ್ತಾರೆ ಅವರ 'ಬಾದರಾಯಣ' ಒಂದು ಉತ್ತಮ ಕತೆ.

**ದೀಪಕ ಜೋಶಿ. ಬೆಳಗಾವಿ**

- ನಾಗರಾಜ ವಸ್ತಾರೆ ಅವರ 'ಬಾದರಾಯಣ' ಕತೆ ಸಂಬಂಧಗಳ ಒಳಸುಳಿಗಳನ್ನು ಮತ್ತು ನಿಜಾರ್ಥಗಳನ್ನು ಬಿಚ್ಚಿಡುತ್ತದೆ.

**ಸುಂದರ್, ಬೆಂಗಳೂರು**

- ಡಾ. ಎಚ್. ಗಿರಿಜಮ್ಮ ಅವರ 'ಸಾಕ್ಷಿ (ಕೇಳಿದ್ದು)' ಕತೆ ಕುತೂಹಲಕಾರಿಯಾಗಿದೆ.

**ಜಯವಂತ ಕಾಮತ್, ಮಂಗಳೂರು**